International Journal of Academic Research
ISSN: 2348-7666; Vol.6, Issue-8, August, 2019
Impact Factor: 6.023 drtvramana@yahoo.co.in

# ಜಾನಪದ ಗೀತ ಸಾಹಿತ್ಯ ಮತ್ತು ಬದಲಾವಣೆ

ಡಾ.ಪ್ರಮೀಳ.ಜಿ
ಮೊಬೈಲ್-9449631573.

**ಪೀಠಿಕೆ**

ಜನಪದ ಸಾಹಿತ್ಯ ಜನತೆಯ ಉಸಿರು, ಜನಜೀವನದ ಉಸಿರು, ಒಂದು ಜನಾಂಗದ ಸಂಸ್ಕೃತಿಯ ದರ್ಪಣ. ಅದು ಒಬ್ಬನಿಂದ ರಚನೆಯಾದುದಲ್ಲ ಬಾಯಿಂದ ಬಾಯಿಗೆ ಹಾಡುತ್ತಾ ಇಡೀ ಮಾನವ ಸಂಸ್ಕೃತಿಗೆ ಮಾದರಿಯಾದ ನುಡಿಮುತ್ತುಗಳೆಂದೇ ಕರೆಯಬಹುದು. ಇವುಗಳಲ್ಲಿ ನಾವು ಕಾಣುವುದು ದುಡಿಮೆ, ಜೀವನದ ದುಃಖ-ದುಮ್ಮಾನ, ಸಂತೋಷ-ಸುಖ ಕ್ಷಾಮ-ಢಾಮರ, ರೋಗ-ರುಜಿನ, ಹುಟ್ಟು-ಸಾವುಗಳ ನೈಜ ಚಿತ್ರಣವಿದೆ. ತಮ್ಮ ಬದುಕಿನಲ್ಲಿ ಕಂಡ ಸತ್ಯ ಘಟನೆಗಳ ಮೂರ್ತ ಸ್ವರೂಪವಿದೆ.

ಹಳ್ಳಿಗರಿಗೆ ಹೊಲ-ಮನೆ ಉತ್ತು-ಬಿತ್ತು ದನ-ಕುರಿಯ ಕೆಲಸಗಳು ನಡದೇ ಇರುತ್ತವೆ. ದೊಡ್ಡವರಿಗೆ ಹೊಲ-ಮನೆ ಸಂತತಿಯ ಕೆಲಸಗಳಿದ್ದರೆ, ಚಿಕ್ಕವರಿಗೆ ದನ-ಕುರಿ ಕಾಯುವ ಕೆಲಸ. ಅವರ ದುಡಿಮೆಗೆ ಬಿಡುವು ಸಿಕ್ಕುವುದು ಹಬ್ಬ-ಜಾತ್ರೆಯ ದಿನಗಳಲ್ಲಿ ಮಾತ್ರ. ಇಂಥ ಶುಭದಿನದಂದು ದಿನವೆಲ್ಲಾ ಸಂತೋಷದಿಂದ ಕಳೆದು ಸಂಜೆಯ ಹೊತ್ತು ಊರ ಹೊರ ದೇವಾಲಯದಲ್ಲಿ ಸಂಭ್ರಮದಿಂದ ಹಾಡಿ-ನಲಿಯುತ್ತಾರೆ.

**ಜನಪದ ಗೀತೆಗಳ ಸ್ವರೂಪ**

ಜಾನಪದ ಬಹುಮುಖಿ ಸ್ತರಗಳಲ್ಲಿ ಜನಪದ ಸಾಹಿತ್ಯ ಒಂದು ಪ್ರಮುಖ ಭಾಗ. ಜಾನಪದ ಸಾಹಿತ್ಯಕ ಬಗೆಯಲ್ಲಿ ಬರುವ ಜನಪದ ಗೀತೆಗಳು ಜನಪದ ಜೀವನದುದ್ದಕ್ಕೂ ವೈವಿಧ್ಯಮಯವಾಗಿ ಪ್ರಕಟವಾಗುತ್ತದೆ. ಸರಳ, ನೇರ, ಸಂಕ್ಷಿಪ್ತ ರೂಪದ ಜನಪದ ಗೀತೆಗಳು ಚಿತ್ತಾಕರ್ಷಕ ಮಾತ್ರವಲ್ಲ, ಒಂದು ಕಾಲದ ಜೀವನದ ಸಂಸ್ಕೃತಿಯನ್ನು ಮೌಖಿಕ ಪರಂಪರೆಯಲ್ಲಿ ಜೀವಂತವಾಗಿಡುವ ಅಪರೂಪದ ಸಾಧನವೂ ಹೌದು. ಜನಪದ ಗೀತೆಗಳು ಸಮುದಾಯದ ಅನುಭವಾಮೃತದ ಫಲವಾಗಿ, ಬದುಕಿನ ವಿವಿಧ ಸ್ತರಗಳಲ್ಲಿ ಪ್ರಕಟವಾಗುತ್ತಿವೆ. ರೈತಾಪಿ ಬದುಕಾದ ಕಳೆ ಕೀಳುವಾಗ, ಪೈರು ನಾಟಿಮಾಡುವಾಗ, ಕಣದಲ್ಲಿ ಕಾಳು ಬೇರ್ಪಡಿಸುವಾಗ, ಕಟ್ಟುವಾಗ, ಬೀಸುವಾಗ, ಇದಲ್ಲದೇ ಹೆಣ್ಣು ಮೈನೆರೆದಾಗ, ಮದುವೆಯ ಸಂದರ್ಭದಲ್ಲಿ ಹಾಡುವ ಸೋಬಾನೆ, ದೇವರ ಉತ್ಸವಗಳಲ್ಲಿ ನಡೆಯುವ ಕೋಲು ಮೇಳ ಗೊರವರ ಕುಣಿತ, ಕಂಸಾಳೆ ಪ್ರದರ್ಶನ, ಚಾಡಿಕೆ ಮೇಳ, ಬೆಳದಿಂಗಳ ಹುಯ್ಯುವುದು, ಮಳೆದೇವರು, ಹರಿಗೆ ಕುಣಿತ, ಸೋಮನ ಕುಣಿತ, ದೇವರು ಕರೆಯುವುದು, ಮದುವೆಗಳಲ್ಲಿನ ಮಡಿಲಕ್ಕಿ ತುಂಬುವುದು, ಬೀಗರನ್ನು ಕರೆಯುವುದು, ಕಳಿಸುವಾಗ ಜರಿಯೋಪದ, ಒಗಟಿನ ಪದ ಹೀಗೆ ವೈವಿಧ್ಯರೂಪದಲ್ಲಿ ಜನಪದ ಸಂಗೀತವಿದೆ. ಇವುಗಳ ರಚನೆ, ಸಂವಹನ ಕ್ರಿಯೆಯನ್ನು ಜಾನಪದ ಜಾನ ವಿಜಾನ ಎಂದು ಕರೆಯಲಾಗಿದೆ. ಜನಪದವನ್ನು ಎಂದೂ ಬತ್ತಲಾರದ ಗಂಗೆಯೆಂದು ಕರೆದವರೂ ಇದ್ದಾರೆ.

ಜನಪದ ಗೀತೆಗಳು ಬದುಕೆಗೆ ಲವಲವಿಕೆ, ಉತ್ಸಾಹ ಮೂಡಿಸುವುದರ ಜೊತೆಗೆ ಆನಂತವನ್ನುಂಟುಮಾಡುತ್ತವೆ, ವಿಭಿನ್ನ ಸಂಸ್ಕೃತಿಯ ಜೊತೆಗೆ ಒಟ್ಟ ಸಮುದಾಯದ ಪ್ರಗತಿಗೆ ಶ್ರಮಿಸುತ್ತಾ, ಹಲವು ಒತ್ತಡ ಪರಿಸ್ಥಿತಿಯ ಜೊತೆಯಲ್ಲಿಯೇ ನೆಲ ಮೂಲತವನ್ನು ಕಟ್ಟಿಕೊಡುವ ಬೆಳೆಸುವ ವಿವೇಕ-ವಿವೇಚನೆ ಜನಪದ ಸಂಸ್ಕೃತಿಯ ಜೀವಂತ ಗುಣ.

ಜನಪದ ಗೀತೆಗಳು ಪದ್ಯಮಾದರಿಗಳು ಸರಳವಾಗಿದ್ದು, ಲಯ, ಗೇಯತೆ, ಪ್ರೀತಿ, ಪ್ರಣಯ, ಭೂಮಿ ಬಸವ, ನೀರು, ಮಳೆ, ಮಗು ಇವುಗಳು ಜನಪದ ಗೀತೆಗಳ ವಸ್ತುಗಳು. ಅರೆಘಳಿಗೆಯಿಂದ ಹಿಡಿದು, ಆರೇಳು ರಾತ್ರಿಗಳ ಕಾಲ ನಿರಂತರವಾಗಿ ಹಾಡುವ ಮಹಾ ಕಾವ್ಯ ಖಂಡಕಾವ್ಯ, ವೀರಗೀತೆಗಳೂ ಈ ವ್ಯಾಪ್ತಿಗೆ ಬರುತ್ತವೆ. ಈ ಸಂಬಂಧ ಆಯಾಯ ಪ್ರಾದೇಶಿಕ ಸಾಂಸ್ಕೃತಿಕ ನಾಯಕರು, ಮಹಾಸತಿಯಂತ ಶೀಲ ಶೌಚಗುಣಗಳಿಂದ ಜನಾಂಗದಮಾದರಿಯಾಗಿದೆ. ಆ ಒಂದು ಸಂಸ್ಕೃತಿಗೆ ದಕ್ಕೆ ಬಂದಾಗ ಅದರ ವಿರುದ್ದ ಹೋರಾಡಿ ಮಡಿದವರ ಬಗೆಗೂ ಸುಧೀರ್ಘ ಕಾವ್ಯ ಕಥನ ಕಾವ್ಯಗಳೂ ಮೌಖಿಕ ಪರಂಪರೆಯಲ್ಲಿ ದಟ್ಟವಾಗಿವೆ.

## ಜನಪದ ಗೀತೆಗಳ ಮಾದರಿಗಳು

ಜನಪದ ಗೀತೆಗಳಲ್ಲಿ ಕುಂತಿಪದ, ಕೊಂತೆಮ್ಮನ ಹಾಡುಗಳು ಸಹ ಇವೆ. ಇವುಗಳು ಶಿಷ್ಟ ಪರಂಪರೆಯ ಮಾದರಿಯ ಚೌಕಟ್ಟು ಹೊಂದಿರುವ ಕಥಾ ಹಂದರ ಬಿನ್ನು ಸರಳ ನಿರೂಪಣೆ, ಸಮಗ್ರ ಕಥೆಯನ್ನು ಹೇಳದಿದ್ದರೂ ಕುತೂಹಲಕಾರವಾಗಿ ಹೇಳುವುದು ಜನಪದ ವಿಶಿಷ್ಟ ಗುಣವೇ ಸರಿ.

ಜನಪದ ಗೀತೆ ಕೇಳಬೇಕಾದ, ಕೇಳಿ ಆನಂದ ಪಡುವ ಕೆಲಸ ಓದಿ ಸುಖಿಸಬಹುದಾದರೂ ಕೇಳುವಾಗಿನ ಸುಖ, ಸೊಗಡು ಸಿಗುವುದಿಲ್ಲ. ಇದು ನಂಬಿಕೆ ಸಂಸ್ಕೃತಿ. ನಾಲಿಗೆಯ ಮೇಲೆ ಅಚಲವಾದ ನಂಬಿಕೆ ನಿಷ್ಟೆ ಜನಪದ ಸಂಸ್ಕೃತಿಯ ಮೂಲ ಗುಣ. ಹಾಡುವವರಿಗೆ ಜಾತಿ, ಹೆಸರು, ಊರು ಮುಖ್ಯವಲ್ಲ. ಗ್ರಾಮದೇವರು ಇಲ್ಲಿ ಮುಖ್ಯ. ಬಾವುಕತೆಯ ಮೂಲಕ ಜೀವನೋತ್ಸಾಹ ಕಾಣುವುದು ಇಲ್ಲಿನ ಪ್ರಮುಖ ಆಶಯವಾಗಿದೆ.

ಜನಪದ ಗೀತೆಗಳಲ್ಲಿ ಕೋಲಾಟ ಪದಗಳು, ಬೀಸುವ ಪದಗಳು, ಸೋಬಾನೆ ಪದಗಳು ಮಳೆರಾಯನ ಪದಗಳು, ದೇವರ ಪದಗಳು, ಲಾಲಿಯ ಪದಗಳು, ಕಥನಗೀತಗಳು ವರ್ಣಿತವಾಗಿವೆ. ಕಥನ ಕಾವ್ಯಗಳು ಸಹ ವಿಶೇಷವಾಗಿ ಗಮನ ಸೆಳಿಯುತ್ತವೆ. ಕಥನ ಗೀತೆಗಳು ಜನಪದ ಸಾಹಿತ್ಯದ ಅತ್ಯಂತ ಪ್ರಮುಖವಾದ ಭಾಗವೇ ಆಗಿದೆ. ಇದನ್ನು ಸಾಹಿತ್ಯದ ಅತ್ಯಂತ ಪ್ರಮುಖವಾದ ಭಾಗವೇ ಆಗಿದೆ. ಇದನ್ನು ಸಾಹಿತ್ಯದ ಅತ್ಯಂತ ಪ್ರಕಾರ ಎಂದೂ ಭಾವಿಸಲಾಗಿದೆ. ನೇರ ಹಾಗೂ ಜನಸಾಮಾನ್ಯರೊಂದಿಗೆ ನೇರ ಸಂಬಂಧ ಇಟ್ಟುಕೊಂಡಿರುವ ಕಥನ ಗೀತೆಗಳು ಜೀವನದ ಮೌಲ್ಯದ ಮೇಲೆ ಬೆಳಕು ಚೆಲ್ಲುತ್ತವೆ.

ಜನಪದ ಗೀತೆಗಳದು ಸರಳವಾದ ರಚನೆ, ಲಲಿತವಾದ ಶೈಲಿ, ಬಹುತೇಕ ತ್ರಿಪದಿ ಛಂದಸ್ಸಿನಲ್ಲಿ ಹುಟ್ಟಿರುತ್ತವೆ. ಚಿಕ್ಕ ಪದ್ಯ,ರಗಳೆ ಪದ್ಯಗಳು ರಚನೆಯೂ ಉಂಟು ಅಂಶಗಳು ಪ್ರಧಾನವಾಗಿರುತ್ತವೆ. ಎಲ್ಲವೂ ಹಾಡಿಕೊಳ್ಳಲು ಒಗ್ಗುತ್ತವೆ.

## ಜನಪದ ಗೀತೆಗಳ ಹುಟ್ಟು

ಜನಪದ ಗೀತೆಯ ಹಾಡುಗಳಿಗೆ ಮನಸೋತು ಸೃಷ್ಟಿಯಾಗಿರುವ ಶಿಷ್ಟಕವಿಗಳ ಗೀತೆಗಳೂ ಜನಪದ ಗೀತೆಯ ಸೋಗಿನಲ್ಲಿ ಕಾಣಿಸಿಕೊಳ್ಳುವುದುಂಟು. ಈ ಹಾಡುಗಳು ಅರ್ಥಪೂರ್ಣವಾಗಿದ್ದರೆ ಶಿಷ್ಟರೆಂದು ತಿಳಿಯದೆ ಜನಪದರೂ ಹಾಡುವುದನ್ನು ಅಲ್ಲಲ್ಲಿ ಕಾಣಬಹುದು. ಉನ್ನತ ವೃದ ಬ್ರಾಹ್ಮಣ, ಜೈನ ಮಹಿಳೆಯರ ಕೆಲವು ಸಂಪ್ರದಾಯದ ಹಾಡುಗಳಲ್ಲಿ ಶಿಷ್ಟ ಸಮುದಾಯದ ವಸ್ತು ಕಥೆ ಪ್ರಸಂಗಗಳಿದ್ದು ಜನಪದ ಧಾಟಿಗೆ ಹತ್ತಿರವಾಗಿ ಹಾಡಿಕೆಯಲ್ಲಿರುತ್ತವೆ.

ಶಿಷ್ಟ ಮೂಲದಿಂದ ಜನಪದತ್ತ ಸಾಗಿಬರುವ ಇಂಥಹ ಹಾಡುಗಳೇ ಜನ್ಪ್ರಿಯ ಗೀತೆಗಳು. ಕನ್ನಡದಲ್ಲಿ ಕವಿ ಸರ್ವಜ, ದ.ರಾ.ಬೇಂದ್ರೆ, ಕೆ.ಎಂನರಸಿಂಹಸ್ವಾಮಿಯವರ ಕೆಲವು ಕವನಗಳು, ಕಡಕೊಳ ಮಹದೇವಪ್ಪ, ಶಿಶುನಾಳ ಶರೀಫ ಮೊದಲಾದವ ತತವಪದಕಾರರ ತತ್ವಪದಗಳು, ಜನಪದ ಗೀತೆಗಳು ಸಿನಿಮಾದ ಹಾಡಾಗಿ ಮಾರ್ಪಾಡಾಗುತ್ತಿವೆ. ಜನಪದ ಗೀತೆ ಶಿಷ್ಟಗೀತೆಯತ್ತ ವಾಲುವುದು, ಶಿಷ್ಟಗೀತೆ ಜನಪದ ಗೀತೆಯತ್ತ ವಾಲುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ಜನಪದ ಗೀತೆಗಳು ಮೂಲ ಧಾಟಿ ಮರೆಯಾಗುವ, ಬದಲಾಗುವ, ಕೆಡೆವ ಸಂಭವ ಇರುವುದಿಲ್ಲ. ಕಾಲದ ಪ್ರವಾಹದಲ್ಲಿ ಇಂಥದ್ದನ್ನು ತಡೆಯುವುದು ಕಷ್ಟಸಾದ್ಯ, ಭವಿಷ್ಯದಲ್ಲಿ ಜನಪ್ರಿಯ ಗೀತೆಗಳ ಪಾಲು ಹೆಚ್ಚಾದರೆ ಆಸ್ಚರ್ಯವಿಲ್ಲ.

ಜನಪದ ಗೀತೆ ಮತ್ತು ಜನಪ್ರಿಯ ಗೀತೆಯ ನಡುವೆ ಸ್ಪಷ್ಟವಾಗಿ ಗೆರೆ ಎಳೆಯುವುದು ಸುಲಭವಲ್ಲ, ಜನಪದ ಗೀತೆಗಳೂ ಕಾಲಕ್ರಮದಲ್ಲಿ ಜನಪ್ರಿಯ ಗೀತಗಳಾಗಬಹುದು. ಜನಪ್ರಿಯತೆ, ಆಕರ್ಷಕತೆ, ಹೊಸದರ ಸ್ವೀಕೃತಿ, ನವೀನತೆಯ ಮನುಷ್ಯ ಸಹಜ ಆಸೆ, ಇಂತಹ ಬದಲಾವಣೆ ಕಾರಣ ಜನಪದ ಗೀತೆಯ ಉಳಿದ ಪ್ರಕಾರಗಳಿಗಿಂತ ಬೇಗ ಆಗುತ್ತದೆ. ಜನಪರಣಿಯತೆ ಇಅದಕ್ಕೆ ಸ್ಪೂರ್ತಿ, ಒಂದು ಪೆಅದೇಶದ ಹಾಡು ಇನ್ನೊಂದು ಕಡೆ ಸಿಗುವುದಕ್ಕೆ ಇದೇ ಕಾರಣ.

**ಜನಪದ ಗೀತೆಗಳು ಜನಪ್ರಿಯ ಗೀತೆಗಳಾಗಿ ಬದಲಾವಣೆ**

ಸಂಪ್ರದಾಯದ ಹಾಡುಗಳು, ಸುಪ್ರಸಿದ್ದ ಜೈನ ಕಥಾನಕಗಳಿಗೆ ಋಣಿಯಾಗಿರುವ ಕೆಲವು ಜೈನ ಜನಪದ ಕಾವ್ಯಗಳು, ಕಥೆಗಳು, ಹರಿಕಥೆ, ಶಿವಕಥೆ ಗೋವಿನ ಹಾಡು, ಅರ್ಜುನ ಜೋಗಿಯ ಹಾಡು ಮತ್ತು ಗಿಳಿಹಾಡು ಮೊದಲಾದವುಗಳನ್ನು ಶುದ್ದ ಜನಪದ ಕಾವ್ಯಗಳ ಎನ್ನುವುದು ಕಷ್ಟ. ಏಕೆಂದರೆ ಈ ನಿರೂಪಕರಿಗೆ ಆಯಾ ಜಾತಿಯ ವಿಧ್ಯಾವಂತರ ಗ್ರಂಥಗಳ, ಗ್ರಂಥ ರಚನೆಯ, ಸಂಸ್ಕೃತಿಯ ಭಾಷೆಯ ಪರಿಚಯ ಹೆಚ್ಚಾಗಿದೆ.

ಜನಪದ ಗೀತೆಗಳ ಸ್ವಾರಸ್ಯ ಪ್ರಕಟವಾಗುವುದು ಪ್ರೇಮಗೀತೆಗಳಲ್ಲಿ ಮುಗ್ದತೆ, ಸಂಕುಚಿತತೆ, ಬಡತನ, ಅವಿದ್ಯಾವಂತಿಕೆಯ ನಡುವೆಯೂ ಪ್ರೀತಿ-ಪ್ರೇಮದ ಬಗೆಗೆ ತುಂಬಾ ಕೋಮಲಭಾವ ಜನಪರರದ್ದು, ರಸಿಕತೆಯ ಅಭಿವ್ಯಕ್ತಿ. ಪೂರಕವಾಗಿ ಬಳಸುವ ಭಾಷೆಯ ದ್ವನಿ ಸಂಕೇತದ ಸೂಚ್ಯತೆ ಜನಪದರ ಪ್ರತಿಭೆ-ಪಾಂಡಿತ್ಯದ ಪ್ರತೀಕವೇ ಆಗಿದೆ. ಜೊತೆಗೆ ಆಯಾಯ ಪ್ರಾದೇಶಿಕ ನೆಲದ ಮೇಲೆ ವಿವರಗಳೊಂದಿಗೆ ಕಟ್ಟಿಕೊಡುವ ಈ ಗೀತೆಗಳ ಹೆಚ್ಚು ಪ್ರಿಯವಾಗಿ ಮೌಖಿಕ ಪರಂಪರೆಯಲ್ಲಿ ಉಳಿಯಲು ಪ್ರಮುಖ ಕಾರಣವಾಗಿವೆ. ಜನಪದ ಗೀತೆಗಳ ಮಹತ್ವ ಕಡಿಮೆಯಾಗುತ್ತಾ ಬರುತ್ತವೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳನ್ನು ಹೇಳುವುದಾದರೆ, ಜನರು ಪಾಶ್ಚಾತ್ಯ ಸಂಸ್ಕೃತಿಯ ಕಡೆಗೆ ಹೆಚ್ಚು ಒಲವನ್ನು ತೋರಿಸುತ್ತಿದ್ದಾರೆ, ಹಿಂದಿ, ಇಂಗ್ಲೀಷ್, ತೆಲುಗು ಮುಂತಾದ ಭಾಷೆಯ ಹಾಡುಗಳನ್ನು ಜನರು ಇಷ್ಟಪಡುತ್ತಿದ್ದಾರೆ. ಸಿನಿಮಾದ ಪ್ರಭಾವದಿಂದ ಸಿನಿಮಾದ ಹಾಡುಗಳನ್ನು ಕೇಳಿ ಕುಣಿಯುತ್ತಾರೆ ಹೊರತು, ಜಾನಪದ ಗೀತೆಗಳನ್ನು ಕೇಳಿ ಕುಣಿದು ಕುಪ್ಪಳಿಸುವವರು ಕಡಿಮೆಯಾಗಿದ್ದಾರೆ. ಹಾಡುಗಳನ್ನು ಲಯ ಬದ್ದವಾಗಿ ಹಾಡುವವರು, ಕಲಿಸುವವರು ಅತ್ಯಂತ ವಿರಳವಾಗುತ್ತಿದ್ದಾರೆ. ಜನಪದ ಗೀತೆಗಳು ಸಂಸ್ಕೃತಿಯ ಜೀವನಾಡಿಗಳು ಎಂಬುದನ್ನು ಜನ ಮರೆಯುತ್ತಿದ್ದಾರೆ, ಪಾಪ್ ಸಂಗೀತ ಪಾಶ್ಚಾತ್ಯ ಸಂಗೀತಗಳಿಗೆ ಹೆಜ್ಜೆ ಹಾಕಿ ಕುಣಿಯುತ್ತಿದ್ದಾರೆ. ನಮ್ಮ ನೆಲ, ನಮ್ಮ ಜನ, ಜನರ ಗೀತೆಗಳ ಕಣ್ಮರೆಯಾಗುತ್ತಾ ಬಂದಿದೆ. ಸಿನಿಮಾದ ಹಾಡುಗಳು ಜನರ ನಾಲಿಗೆಯ ಮೇಲೆ ಸುಲಲಿತವಾಗಿ ಬರುತ್ತಿವೆ, ಜನಪದ ಗೀತೆಗಳನ್ನು ಕೇವಲ ಸಂಪ್ರದಾಯ ಬದ್ದ ಜನರು ಹಾಡಬೇಕೆಂಬ ಮನೋಭಾವ ಮಾಡುತ್ತಿದೆ. ಹೀಗೀಗ ಜನ ಬದಲಾವಣೆಯನ್ನು ಬಯಸುತ್ತಿದ್ದಾರೆ ಹಳೆಯ ಹಾಡು –ಭಾವ ಲಯ ಸ್ವರಗಳು ಮರೆಯಾಗುತ್ತಿವೆ. ಜನಪದಕ್ಕೆ ಇಂತವರೇ ಕರ್ತೃ ಎಂಬುದಿಲ್ಲವಾದರೂ ಭಾವಲಹರಿಯನ್ನು ಕಡಿಮೆಗೊಳಿಸುತ್ತಾ ಬರುತ್ತಿದ್ದಾರೆ.

ಜನಪದ ಗೀತೆಗಳೆಂದರೆ ಕೇವಲ ಹಳ್ಳಿಯ ಜನರು ಹಾಡುವ ಹಾಡುಗಳೆಂಬ ಮನೋಧೋರಣೆ ಬೆಳೆಸಿಕೊಳ್ಳುತ್ತಿದ್ದಾರೆ. ಈ ಗೀತೆಗಳು ಎಲ್ಲಾ ವಯಸ್ಸಿನವರು ಹಾಡಿ ನಲಿಯಬಹುದಾಗಿದ್ದರೂ ಯುವಜನತೆ ನಿರಾಸಕ್ತಿಯನ್ನು ತೋರಿಸುತ್ತಿದ್ದಾರೆ. ಸಮೂಹ ಮಾಧ್ಯಮಗಳು ಪಭಾವವು ಹೆಚ್ಚಾಗಿದೆ. ಅಂತರ್ಜಾಲದ ಮೂಲಕ ಬೇಕಾದ ಭಾಷೆಯ ಹಾಡುಗಳನ್ನು ಕೇಳುತ್ತಾ ಸ್ಥಳೀಯ ಗೀತೆಗಳನ್ನು ಕೇಳುವವರೇ ಇಲ್ಲವಾಗಿದ್ದಾರೆ. ಮನರಂಜನೆಯ ಕಲೆಗಳು ಸಹ ಇಂದು ಬದಲಾಗುತ್ತಾ ಸಾಗಿವೆ. ಗೀತೆಗಳು, ಗೀತೆಗಳ ಸ್ವಾರಸ್ಯವನ್ನು ಜನರು ಗಮನಿಸುವ ಪ್ರಮಾಣವು ಕಾಡಿಮೆಯಾಗುತ್ತಾ ಬರುತಿದೆ. ಭಾಷಾ ಶ್ರೀಮಂತಿಕೆಯನ್ನು ಜನ ಮರೆತ್ತಿದ್ದಾರೆ, ಅದರಲ್ಲೂ ಕನ್ನಡ ಭಾಷೆ, ಸಂಸ್ಕೃತಿ ಅದರ ಹಾಡುಗಳು ಎಂದರೆ ತೃಣಮೂಲದವು ಎಂಬ ಮನೋಭಾವ ಬಂದಿದೆ. ಜನರಲ್ಲಿ ಈ ಭಾವನೆ ಹೋದರೆ ಮಾತ್ರ ಗೀತೆಗಳು ಶಾಶ್ವತವಾಗಿ ಉಳಿಯಲು ಸಾಧ್ಯ. ಆಧಿನಿಕತೆಯ ಸಂಕೇತಗಳೆಂದೇ ತೋರುತ್ತಿರುವ ಕ್ಲಬ್ ಗಳು, ಬಾರ್ ಗಳಲ್ಲಿ ಜನ ಗೀತೆಗಳನ್ನು ಕೇಳುವುದಿರಲೀ ಕನ್ನಡವನ್ನು ಬಳಸುವವರೇ ಇಲ್ಲವಾಗಿದ್ದಾರೆ. ಪಾಶ್ಚಾತ್ಯ ಹಾಡುಗಳಿಗೆ ಮೈಮರೆತು ಕುಣಿಯುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ ಗೀತೆಗಳನ್ನು ಕೇವಲ ಪುಸ್ತಕದಲ್ಲಿ, ಜನರ ಬಾಯಲ್ಲಿ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಬಹುದು. ಅಬ್ಬರದ ಹಾಡುಗಳ ಮಧ್ಯೆ ಜೋರು ಸಂಗೀತದ ನಡುವೆ ಇರುವ ಹಾಡುಗಳನ್ನು ಮೆಲುಕು ಹಾಕುವ ಜನರ ಬಾಯಲ್ಲಿ ಜನಪದ ಗೀತಗಳ ಮಹತ್ವವನ್ನು ಸಾರುವ ಕೆಲಸ ನಡೆಯಬೇಕಿದೆ.

**ಉಪಸಂಹಾರ**

ಒಟ್ಟಿನಲ್ಲಿ ಹೇಳುವುದಾದರೆ ಜನಪದ ಗೀತೆಗಳು ಜನರ ಹೃದಯದ ಜೀವನಾಡಿಗಳೇ ಆಗಿವೆ. ಜನರ ಆಶೋತ್ತರಗಳು ಬದಲಾವಣೆಗಳು ಮಹತ್ತರ ದಿಕ್ಕಿನತ್ತ ಸಾಗುತ್ತಿದೆ. ಏನೇ ಸಿನಿಮಾ ಹಾಡುಗಳು ಮಾಧ್ಯಮಗಳ ಪ್ರಭಾವವು ಎಷ್ಟೇ ಇದ್ದರೂ ನಾವು ನಮ್ಮದು, ನಮ್ಮ ನೆಲ, ಜಲ, ನಮ ಜನ, ನಮ್ಮ ಹಾಡು ಎಂಬುದು ಮರೆಯಬಾರದು, ನಮ್ಮತನವ ಬಿಟ್ಟುಕೊಡಬಾರದು, ನಮ್ಮ ಸಂಸ್ಕೃತಿಯ ರಕ್ಷಣೆ ಎಲ್ಲರ ಹೊಣೆ ಎಂಬುದನ್ನು ಅರಿತಿರಬೇಕು. ಏನಾದರಾಗಲೀ ಪಾಶ್ಚಾತ್ಯ ಸಂಸ್ಕೃತಿಯ ಗಾಳಿಗೆ ಸಿಲುಕಬಾರದು, ಏನೇ ಅಡೆತಡೆಗಳು ಬಂದರೂ ನಮ್ಮನ್ನು ನಾವು ಮಾರಿಕೊಳ್ಳಬಾರದು, ಪುರಾತನ ಕಾಲದಿಂದಲೂ ಬಂದಿರುವ ನಂಬಿಕೆ, ಸಂಪ್ರದಾಯ ಗೀತೆಗಳನ್ನು ಮರೆಯಬಾರದು.

ಒಂದು ಕಲೆ ಸಂಸ್ಕೃತಿಯನ್ನು ಬೆಳೆಸಿ ಪ್ರೋತ್ಸಾಹಿಸುವ ಕೆಲಸ ಎಲ್ಲರಿಂದಲೂ ನಡೆಯಬೇಕು, ಒಬ್ಬರಿಂದ ಮಾತ್ರ ಸಂಸ್ಕೃತಿಯ ಗೀತೆಗಳ ರಕ್ಷಣೆ ಸಾಧ್ಯವಾಗದ ಮಾತು. ನಾವೆಲ್ಲರೂ ಒಂದೇ ಎನ್ನುವ ಮನೋಭಾವ, ಮನೋಸ್ಥೈರ್ಯ ಬೆಳೆಸಿಕೊಳ್ಳಬೇಕು. ಪಾಶ್ಚಾತ್ಯರನ್ನು ಅನುಕರಣೆ ಮಾಡುವುದನ್ನು ಮೊದಲು ಬಿಡಬೇಕು, ಇಡೀ ವಿಶ್ವಕ್ಕೆ ಒಂದು ಮಾದರಿಯಾಗಿ ಬದುಕಬೇಕು.

**ಆಧಾರ ಗ್ರಂಥಗಳು**

೧. ಡಾ.ಕೆ.ಜಿ. ಗುರುಮೂರ್ತಿ - ಕರ್ನಾಟಕ ಜಾನಪ್ದ ಹಬ್ಬಗಳು ಮತ್ತು ಅವುಗಳ ಸಂಸ್ಕೃತೀಕರಣ.
೨.ಪ್ರೊ.ಡಿ.ಲಿಂಗಯ್ಯ, ಡಾ.ಕೆ,ಆರ್. ಸಂಧ್ಯಾರೆಡ್ಡಿ - ಜಾನಪದ ಸ್ವರೂಪ ಮತ್ತು ಸಾಹಿತ್ಯ.
೩. ಪ್ರೊ.ಸೂಗಯ್ಯ ಹಿರೇಮಠ - ಜಾನಪದ ಸಂಸ್ಕೃತಿ.
೪. ಡಾ.ಚಿಕ್ಕಣ್ಣ ಯಣ್ಣೆಕಟ್ಟೆ - ತುಮಕೂರು ಜಿಲ್ಲೆಯ ಜಾನಪದೀಯ ನೆಲೆಗಳು.
೫. ಡಾ.ಚಿಕ್ಕಣ್ಣ ಯಣ್ಣೆಕಟ್ಟೆ - ತುಮಕೂರು ಜಿಲ್ಲೆಯ ಜಾನಪದೀಯ ಅಧ್ಯಯನ.